**Government of Karnataka**

**Deposition Sheet (R.P.N.57) Form 4 Criminal**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 203/2017 |

ದಿನಾಂಕ 24-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 5 ಪ್ರಾಸಾಃ 5

| | |
|---|---|
| ಹೆಸರು | ಹೊನ್ನಪ್ಪ |
| ತಂದೆಯ ಹೆಸರು | ಸಿದ್ದಪ್ಪ |
| ವಯಸ್ಸು | 45 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಕೋಣಚಪ್ಪಳಿ ತಾಲುಕು ದೇವದುರ್ಗ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ಚಾಸಾ-1 ನನಗೆ ದೂರದ ಸಂಬಂಧಿಕರು. ಚಾಸಾ-2 ಮತ್ತು 3 ನನಗೆ ದೂರದ ಸಂಬಂಧಿಕರು. ದಿನಾಂಕ: 31-08-2014 ರಂದು ಬೆಳಿಗ್ಗೆ 7-45 ಗಂಟೆಗೆ ಹೊಳೆದಂಡೆಯ ಗದ್ದೆಯಲ್ಲಿ ಮೇವು ಮಾಡಿಕೊಂಡು ಬರಲು, ಮಲ್ಲಪ್ಪ, ನಿಂಗಪ್ಪ ಮತ್ತು ಶರಣಬಸವ ಇವರು ಹೋಗಿದ್ದರು. ಎರಡು ಹೊಲ ದಾಟಿದ ಮೇಲೆ ಅಮರೇಶಗೌಡನ ಹೊಲದಲ್ಲಿ ಸೋಲಾರ ತಂತಿಯನ್ನು ಅಳವಡಿಸಿದ್ದು, ಅದನ್ನು ಬೂದೆಪ್ಪಗೌಡ ಇವರಿಗೆ ಲೀಜ್‌ಗೆ ಕೊಟ್ಟಿರುತ್ತಾರೆ. ಸೋಲಾರ ತಂತಿಗೆ ಕೆ ಇ ಬಿ ತಂತಿ ಬಿದ್ದಿದ ಪರಿಣಾಮವಾಗಿ ಸೋಲಾರ ತಂತಿಯಲ್ಲಿ ವಿದ್ಯುತ್ ಹರಿದಿತ್ತು. ಆ ಸೋಲಾರ ತಂತಿ ಶರಣಬಸವನಿಗೆ ತಗಲಿ ಅಲ್ಲಯೇ ಸ್ಥಳದಲ್ಲಿಯೇ ಮರಣ ಹೊಂದಿರುತ್ತಾನೆ. ಶರಣಬಸವನಿಗೆ ತಲೆಯ ಹಿಂಭಾಗದಲ್ಲಿ

ತಂತಿ ತಗಲಿರುತ್ತದೆ. ಹೊಲದ ಲೀಜ್ ಮಾಡಿದವರ ತಪ್ಪಿನಿಂದ ಅಪಘಾತವಾಗಿರುತ್ತದೆ. ಅಪಘಾತವಾಗುವ ಕಾಲಕ್ಕೆ ನಾನು ಊರಿನಲ್ಲಿದ್ದೆ ಈ ವಿಷಯವನ್ನು ಊರಿನ ಜನರು ನನಗೆ ತಿಳಿಸಿರುತ್ತಾರೆ. ಈ ಬಗ್ಗೆ ದೂರನ್ನು ಚಾಸಾ-1 ರವರು ಕೊಟ್ಟಿರುತ್ತಾರೆ. ಈ ಬಗ್ಗೆ ಪೋಲಿಸರು ನನ್ನನ್ನು ವಿಚಾರ ಮಾಡಿರುತ್ತಾರೆ.

**ಪಾಟೀಸವಾಲು: ಆರೋಪಿತರ ಪರ ಶ್ರೀ ವಿ ಎಮ್ ಎಮ್ ವಕೀಲರಿಂದ :-**

1. ಫಿರ್ಯಾದಿದಾರರು ನನಗೆ 2ನೇ ಅಣ್ಣ ತಮ್ಮಂದಿರಾಗಬೇಕು. ಚಾಸಾ-2 ಮತ್ತು 3 ನನ್ನ ಅಣ್ಣನ ಮಕ್ಕಳು. ಚಾಸಾ-6 ನಮ್ಮೂರಿನ ಮುಖಂಡರು. ಊರಿನಿಂದ ಸುಮಾರು ಅರ್ಧ ಕಿ ಮಿ ದೂರ ಘಟನಾ ಸ್ಥಳ ಇದೆ. ಘಟನಾ ಸ್ಥಳವು ಊರಿನ ಉತ್ತರ ದಿಕ್ಕಿಗೆ ಇದೆ. ಊರಿನ ಸುಮಾರು 100 ಜನರು ಘಟನಾ ಸ್ಥಳಕ್ಕೆ ಹೋಗಿರುತ್ತಾರೆ. ಘಟನಾ ಸ್ಥಳವು ಉತ್ತರ ದಿಕ್ಕಿಗೆ ಇರುತ್ತದೆ. ಹೊಳೆ ದಂಡೆಗೆ ಹೋಗಿ ಮೇವನ್ನು ಮಾಡಿಕೊಂಡು ಬರುತ್ತಿದ್ದರು. ಮೇವನ್ನು ಯಾರ ಹೊಲದಲ್ಲಿ ಮಾಡಿದ್ದರು ಎಂದು ನಾನು ನೋಡಿಲ್ಲ. ಆ ಹೊಲದ ಸರ್ವೆ ನಂಬರ್ ನನಗೆ ಹೇಳಲು ಬರುವುದಿಲ್ಲ. ಹೊಲದ ಪಹಣೀ ಪತ್ರಿಕೆಯನ್ನು ನಾನು ನೋಡಿಲ್ಲ. ಅಮರೇಶಗೌಡ , ಶಿವನಗೌಡ ಮತ್ತು ಮಲ್ಲಪ್ಪಗೌಡ ಹಾಗೂ ಭೀಮರಾಯ ಗೌಡ ಇವರ ಹೊಲಗಳಲ್ಲಿ ಕೆ ಇ ಬಿ ವಿದ್ಯುತ್ ಕಂಬಗಳು ಇವೆ. ಘಟನೆ ಸ್ಥಳದಲ್ಲಿ ಎಷ್ಟು ಕಂಬಗಳಿವೆ ಎಂದರೆ ಸಾಕ್ಷಿಯು ಟಿ ಸಿ ಗೆ 2 ಕಂಬಗಳಿದ್ದವು ಅದರಲ್ಲಿ ಒಂದು ಕಂಬ ಬಿದ್ದಿತ್ತು ಎನ್ನುತ್ತಾರೆ. ಟಿ ಸಿ ಯಾರ ಹೊಲದಲ್ಲಿತ್ತು ಎಂದರೆ ಸಾಕ್ಷಿಯು ಅಮರೇಶಗೌಡ ಮತ್ತು ಶಿವನಗೌಡ ಇವರ ಹೊಲದಲ್ಲಿ ಇದೆ ಇವರ ಹೊಲದಲ್ಲಿಯೇ ಇದೆಯೆಂದು ಗುರುತಿಸಲು ನನಗೆ ಆಗುವುದಿಲ್ಲ ಎನ್ನುತ್ತಾರೆ. ಯಾರ ಹೊಲದಲ್ಲಿ ಕೆ ಇ ಬಿ ಕಂಬ ಬಿದ್ದಿತ್ತು ಎಂದರೆ ಸಾಕ್ಷಿಯು 10 ವರ್ಷ ಹಿಂದೆ ಘಟನೆಯಾಗಿದ್ದು ನನಗೆ ಈಗ ನೆನಪಿಲ್ಲ ಎನ್ನುತ್ತಾರೆ. ಕೆ ಇ ಬಿ ಕಂಬ ಯಾವ ದಿಕ್ಕಿಗೆ ಬಿದ್ದಿತ್ತು ಎಂದು ನನಗೆ ಈಗ ನೆನಪಿಲ್ಲ. ಕೆ ಇ ಬಿ ಕಂಬ ಘಟನೆಯಾಗುವ 2 ದಿನ ಮೊದಲು ಬಿದ್ದಿತ್ತು.

2. ಘಟನೆಯಾಗುವ ಪೂರ್ವದಲ್ಲಿ 2 ದಿನ ಮಳೆ ಬಂದಿತ್ತು ಎಂದರೆ ಸರಿ. ಗದ್ದೆಯಲ್ಲಿ ನೀರು ನಿಲ್ಲುವಷ್ಟು ಮಳೆಯಾಗಿತ್ತು ಎಂದರೆ ಸಾಕ್ಷಿಯು ಅಷ್ಟೇನು ಆಗಿರಲಿಲ್ಲ ಎನ್ನುತ್ತಾರೆ. ಮಳೆ ಜಾಸ್ತಿಯಾಗಿದ್ದರಿಂದ ಜನರು ಗದ್ದೆಯಲ್ಲಿ ಕೆಲಸ ಮಾಡದೇ ಮನೆಯಲ್ಲಿದ್ದರು ಎಂದರೆ ಸರಿಯಲ್ಲ. ಸೋಲಾರ ತಂತಿ ಹಾಕಿದ್ದರಿಂದ ಹೊಲಕ್ಕೆ ಹೋಗಲು ದಾರಿ ಇಲ್ಲ ಎಂದರೆ ಸಾಕ್ಷಿಯು ಅವರು ದಾಟಿದ ದಾರಿಯಾಗಿದೆ ಎನ್ನುತ್ತಾರೆ. ಸೋಲಾರ ತಂತಿಗೆ ಯಾವುದೇ ಎಲೆಕ್ಟ್ರಿಕ್ ವಿದ್ಯುತ್ ಸಂಪರ್ಕ ಇರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸೋಲಾರ ತಂತಿಗೆ ಯಾವುದೇ ಎಲೆಕ್ಟ್ರಿಕ್ ವಿದ್ಯುತ್ ಸಂಪರ್ಕ ಕೊಟ್ಟಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸೋಲಾರ ತಂತಿಯನ್ನು ಪ್ರಾಣಿಗಳು ಮತ್ತು ಮನುಷ್ಯರು ಅದನ್ನು ಮುಟ್ಟಿದಾಗ ಜೀವದ ಅಪಾಯ ಇರುವುದಿಲ್ಲ ಎಂದರೆ ಸರಿ.

3. ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೇನೆ. ಶಿವನಗೌಡ ಆನೇರ ಇವರ ಹಾಳು ಬಿದ್ದ ಹೊಲದಲ್ಲಿದ್ದ ಒಂದು ಕರೆಂಟ್ ಕಂಬ ಬಿದ್ದು ಕರೆಂಟರ್ ಇರುವ ವೈರ್ ಸೋಲಾರ ತಂತಿಯ ಮೇಲೆ ಬಿದ್ದು ಕರೆಂಟ್ ಹರದಿತ್ತು ಎಂದು ಹೇಳಿಕೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಕೊಟ್ಟಿದ್ದೇನೆ ಎನ್ನುತ್ತಾರೆ. 3 ದಿನಗಳ ಹಿಂದೆ ಕರೆಂಟ್ ಕಂಬ ಬಿದ್ದು ಹೋಗಿದ್ದು ಈ ಬಗ್ಗೆ ಕೆ ಇ ಬಿ ಅಧಿಕಾರಿಗಳು ದೇವದುರ್ಗ ಇವರು ಯಾವುದೇ ಗಮನ ಹರಿಸದೇ ಅವರ ಅಲಕ್ಷ್ಯತನೆ ಮತ್ತು ಅಜಾಗರೂಕತೆ ಎಂದು ಹೇಳಿಕೆ ಕೊಟ್ಟಿದ್ದೇನೆಂದರೆ ಸರಿ. ಕೆ ಇ ಬಿ ಸಿಬ್ಬಂದಿಯಾದ ಮಹಿಬೂಬ ಲೈನ್ ಮ್ಯಾನ್ ಕ್ಯಾಂಪ್ ದೋಂಡಂಬಳಿ ಗ್ರಾಮ ಪಂಚಾಯಿತಿ ಇವರು ಕಾರಣರಾಗಿರುತ್ತಾರೆ ಎಂದು ಹೇಳಿಕೆ ಕೊಟ್ಟಿದ್ದೀರಾ ಎಂದರೆ ಕೊಟ್ಟಿದ್ದೇನೆ ಎನ್ನುತ್ತಾರೆ. ಅಮರೇಶಗೌಡನ ಹೊಲದಲ್ಲಿ ವಿದ್ಯುತ್ ಕಂಬ ಮತ್ತು ವಿದ್ಯುತ್ ವೈರ್ ಇಲ್ಲ ಎಂದರೆ ಸಾಕ್ಷಿಯು ಇದೆ ಎನ್ನುತ್ತಾರೆ. ಪೋಲಿಸರಿಗೆ ಅಮರೇಶಗೌಡನ ಹೊಲದಲ್ಲಿ ಹೊಲದಲ್ಲಿ ವಿದ್ಯುತ್ ಕಂಬ ಮತ್ತು ವಿದ್ಯುತ್ ವೈರ್ ಇದೆ ಎಂದು ಹೇಳಿರುತ್ತೇನೆ. ಈ ರೀತಿ ನೀವು ಹೇಳಿಲ್ಲ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಶಿವನಗೌಡ ಆನೇರ ಇವರ ಹೊಲದಲ್ಲಿ ವಿದ್ಯುತ್ ಕಂಬ ಬಿದ್ದು ವಿದ್ಯುತ್ ವೈರ ಕೆಳಗಡೆ ಬಿದ್ದು ಅಪಘಾತವಾಗಿದೆ ಎಂದರೆ ಸರಿ. ಅಪಘಾತಕ್ಕೆ ಆರೋಪಿತರು ಯಾವುದೇ ರೀತಿ ಸಂಬಂಧ

ಇಲ್ಲ ಎಂದರೆ ಸರಿಯಲ್ಲ. ಫಿರ್ಯಾದಿದಾರರು ಕೆ ಬಿ ಯವರ ಮೇಲೆ ಮತ್ತು ಕೆ ಇ ಬಿ ಲೈನ್ ಮೆನ್ ಮೆಹೆಬೂಬು ಮೇಲೆ ಏನಾದರೂ ಕೇಸ್ ಮಾಡಿದ್ದಾರೆಯೇ ಎಂದರೆ ಸಾಕ್ಷಿಯು ದೂರು ಕೊಟ್ಟಿದ್ದಾರೆ ಎನ್ನುತ್ತಾರೆ. ಮೃತ ಹುಡುಗನ ತಂದೆ ತಾಯಿಯವರು ಕೆ ಇ ಬಿ ಯವರು ಪರಿಹಾರ ಕೊಡುತ್ತೇವೆಂದು ಹೇಳಿದರು ಎಂದರೆ ಸಾಕ್ಷಿಯು 2 ಲಕ್ಷ ರೂ ಪರಿಹಾರ ಕೊಟ್ಟಿದ್ದಾರೆ ಎನ್ನುತ್ತಾರೆ. ಕೆ ಇ ಬಿ ಯವರ ಅಲಕ್ಷ್ಯನದಿಂದ ಘಟನೆ ಆಗಿದ್ದರೂ ಅವರು ಪರಿಹಾರ ಕೊಟ್ಟಿದ್ದರಿಂದ ಅವರ ಮೇಲೆ ಕೇಸ್ ಮಾಡಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆರೋಪಿತರು ಹಣವನ್ನು ಕೊಡದೇ ಇರುವ ಕಾರಣ ನೀವು ಅವರ ಮೇಲೆ ಸುಳ್ಳು ದೂರು ಕೊಟ್ಟಿದ್ದೀರಿ ಎಂದರೆ ಸರಿಯಲ್ಲ. ನೀವು ನಿಮ್ಮ ಅಣ್ಣನ ಮಾತು ಕೇಳಿಕೆಕೊಂಡು ಅವರಿಗೆ ಅನೂಕೂಲ ಆಗಲೆಂದು ಆರೋಪಿತರ ಅಲಕ್ಷ್ಯತನ ಇಲ್ಲದೆ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿತರಿಗೂ ಘಟನೆಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಆ ದಿನ ಘಟನಾ ಸ್ಥಳಕ್ಕೆ ಹೋಗಿಲ್ಲ ಘಟನೆಯ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನೀವು ಪೋಲಿಸರಿಗೆ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ

# Government of Karnataka
## Deposition Sheet (R.P.N.57) Form 4 Criminal

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 203/2017 |

ದಿನಾಂಕ 24-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 6 ಪ್ರಾಸಾಃ 6

| | |
|---|---|
| ಹೆಸರು | ರಂಗಣ್ಣ |
| ತಂದೆಯ ಹೆಸರು | ತಿಮ್ಮಣ್ಣ |
| ವಯಸ್ಸು | 50 ವರ್ಷ |
| ಉದ್ಯೋಗ | ಏನೂ ಇಲ್ಲ. |
| ವಾಸಸ್ಥಳ | ಕೋಣಚಪ್ಪಳಿ ತಾಲುಕು ದೇವದುರ್ಗ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ಚಾಸಾ-1 ರಿಂದ 5 ನನಗೆ ಪರಿಚಯ ಇರುತ್ತಾರೆ ನಮ್ಮೂರಿನವರು. ಆರೋಪಿತರ ಪರಿಚಯ ಇರುತ್ತದೆ. ಸುಮಾರು 8-10 ವರ್ಷದ ಹಿಂದೆ ಬೆಳಿಗ್ಗೆ 7-45 ಗಂಟೆಗೆ ಆರೋಪಿ ಅಮರೇಶಗೌಡನ ಹೊಲದಲ್ಲಿ ಸೋಲಾರ ತಂತಿಯನ್ನು ಹಾಕಿದ್ದರು. ಬೂದೆಪ್ಪಗೌಡನಿಗೆ ಹೊಲವನ್ನು ಲೀಜ್‌ಗೆ ಕೊಟ್ಟಿದ್ದರು. ಶಿವನಗೌಡನ ಹೊಲದಲ್ಲಿ ವಿದ್ಯುತ್ ತಂತಿ ಸೋಲಾರ ತಂತಿಯಲ್ಲಿ ಬಿದ್ದಿತ್ತು ಸೋಲಾರ ತಂತಿಯಲ್ಲಿ ವಿದ್ಯುತ್ ಇತ್ತು, ಮೇವು ತರಲು ಮೂರು ಜನ ಹುಡುಗರು ಹೋಗಿದ್ದರು. ಶರಣಬಸವನಿಗೆ ಸೋಲಾರ ತಂತಿಯಿಂದ ವಿದ್ಯುತ್ ಹರಿದು ಸ್ಥಳದಲ್ಲಿಯೇ ಮೃತಪಟ್ಟಿದ್ದನು. ಶರಣಬಸವನಿಗೆ ತಲೆಯ ಹಿಂಬಾಗದಲ್ಲಿ ಗಾಯವಾಗಿತ್ತು. ಈ ಬಗ್ಗೆ ಪೋಲಿಸರು ಬಂದಿದ್ದರು, ಪಂಚನಾಮೆ ಮಾಡಿರುತ್ತಾರೆ.

ನಾನು ಪಂಚನಾಮೆಗೆ ಸಹಿ ಮಾಡಿರುತ್ತೇನೆ. ಹೊಲದ ಮಾಲೀಕನ ತಪ್ಪಿನಿಂದ ಅಪಘಾತವಾಗಿರುತ್ತದೆ ಈ ಬಗ್ಗೆ ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀಸವಾಲು: ಆರೋಪಿತರ ಪರ ಶ್ರೀ ವಿ ಎಮ್ ಎಮ್ ವಕೀಲರಿಂದ :-**

1. ಪಂಚನಾಮೆಗೆ ನಾನು ಚಾಸಾ-5, 7 ಮತ್ತು 8 ರವರು ಸಹಿ ಮಾಡಿದೆವು. ಪಂಚನಾಮೆಗೆ 2 ಕಡೆ ಸಹಿ ಮಾಡಿದೆನು. ಪಂಚನಾಮೆಯ ವಿಷಯವನ್ನು ಓದಿ ಹೇಳಿದ್ದಾರೆಯೇ ಎಂದರೆ ಸಾಕ್ಷಿಯು ಓದಿ ಹೇಳಿದ್ದಾರೆ ಎನ್ನುತ್ತಾರೆ. 4-5 ಜನ ಪೋಲಿಸರು ಪಂಚನಾಮೆ ಮಾಡಲು ಬಂದಿದ್ದರು. ಪಂಚನಾಮೆ ಮ ಮಾಡಿದಾಗ ಬೆಳಿಗ್ಗೆ 9-00 ಗಂಟೆಗೆ ಬಂದಿದ್ದರು. ನಾನು ಸ್ಥಳದಲ್ಲಿ ಬೆಳಿಗ್ಗೆ 8-00 ಗಂಟಯಿಂದ ಇದ್ದೇನು, ಆ ಸಮಯಲದಲ್ಲಿ ಊರಿನ ಬಹಳಷ್ಟು ಜನರು ಇದ್ದರು. ಪಂಚನಾಮೆ ಬಿಟ್ಟು ಪೋಲಿಸರು ನನ್ನ ಹೇಳಿಕೆ ಪಡೆದಿಲ್ಲ. ಸರ್ವೆ ನಂಬರ್ ಮತ್ತು ಎಕರೆ ಗುಂಟೆ ಬರೆದಿರುವ ಬಗ್ಗೆ ನನಗೆ ಗೊತ್ತಿಲ್ಲ. ಸುಮಾರು 3-4 ಕಂಬಗಳು ಶಿವನಗೌಡನ ಹೊಲದಲ್ಲಿದ್ದವು. ಅದರಲ್ಲಿ ಒಂದು ವಿದ್ಯುತ್ ಕಂಬ ಬಿದ್ದಿತ್ತು. ಶಿವನಗೌಡನ ಹೊಲ ಬಿಟ್ಟರೆ ಪೂಜಾರಿಯವರ ಹೊಲ ಮತ್ತು ಹರಿಜನರ ಹೊಲ ಇವೆ. ದೂರು ಕೊಡಲು ನಾನು ಫಿರ್ಯಾದಿದಾರರ ಜೊತೆ ಬಂದಿಲ್ಲ. ಫಿರ್ಯಾದಿದಾರರು ಯಾರ ಯಾರ ಮೇಲೆ ಫಿರ್ಯಾದಿಯನ್ನು ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಕೆ ಇ ಬಿ ಯವರ ಮೇಲೆ ಕೊಟ್ಟಿದ್ದಾರೆ. ಕೆ ಇ ಬಿ ಯವರ ಮೇಲೆ ಪ್ರಕರಣ ದಾಖಲಾದ ಬಗ್ಗೆ ನನಗೆ ಗೊತ್ತಿಲ್ಲ. ಪರಿಹಾರ ಸಂಬಂಧ ಅರ್ಜಿ ಹಾಕಿರುವ ಬಗ್ಗೆ ನನಗೆ ಗೊತ್ತಿಲ್ಲ. ಕೆ ಇ ಬಿ ರವರು ಹುಡುಗನ ಕುಟುಂಬಕ್ಕೆ ಪರಿಹಾರ ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಘಟನೆಯು ಕೆ ಇ ಬಿ ಕಂಬ ಬಿದ್ದು ತಂತಿ ಬಿದ್ದಿದೆ ಎಂದು ಆಗಿದೆ ಎಂದರೆ ಸಾಕ್ಷಿಯು ಕೆ ಇ ಬಿ ತಂತಿ ಸೋಲಾರ ತಂತಿ ಮೇಲೆ ಬಿದ್ದಿದ್ದರಿಂದ ಆಗಿದೆ ಎನ್ನುತ್ತಾರೆ.

2. ಶಿವನಗೌಡನ ಹೊಲದಲ್ಲಿ ಕೆ ಇ ಬಿ ಕಂಬ ಬಿದ್ದು 3 ದಿನ ಆಗಿತ್ತು. ನಿಮ್ಮ ಹೇಳಿಕೆಯಲ್ಲಿ 3 ದಿನಗಳ ಹಿಂದೆ ಕರೆಂಟ್ ಕಂಬ ಬಿದ್ದು ಕೆ ಇ ಬಿ ಅಧಿಕಾರಿಗಳು ಗಮನ ಹರಿಸದೆ ಅಲಕ್ಷ್ಯತನ ಮತ್ತು

ಅಜಾಗರೂಕತೆ ಎಂದು ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೀರಿ ಎಂದರೆ ಸಾಕ್ಷಿಯು ಕೆ ಇ ಬಿ ಕಂಬ ಬಿದ್ದು ಅದರ ವಿದ್ಯುತ್ ವೈರ ಸೋಲಾರ ತಂತಿಯ ಮೇಲೆ ಬಿದ್ದಿದೆ ಎಂದು ಹೇಳಿಕೆ ಕೊಟ್ಟಿದ್ದೇನೆ ಎನ್ನುತ್ತಾರೆ. ಘಟನೆಯಾಗುವ 2 ದಿನದ ಹಿಂದೆ ಸಾಕಷ್ಟು ಮಳೆಯಾಗಿತ್ತು ಎಂದರೆ ಸರಿ. ಹೊಲದಲ್ಲಿ ನೀರು ನಿಂತು ಕೆಸರು ಇತ್ತು ಎಂದರೆ ಸರಿ. ಕೆಸರಿರುವ ಕಾರಣ ಹೊಲದಲ್ಲಿ ಕೆಲಸ ಮಾಡಲು ಬರುತ್ತಿರಲಿಲ್ಲ ಎಂದರೆ ಸರಿ. ಸೋಲಾರ ತಂತಿ ಗೆ ಸ್ಪರ್ಶ ಮಾಡಿದರೆ ಪ್ರಾಣಿಗಳು ಮತ್ತು ಮನುಷ್ಯರಿಗೆ ಜೀವ ಹಾನಿಯಾಗುವುದಿಲ್ಲ ಎಂದರೆ ಸಾಕ್ಷಿಯು ಸೋಲಾರ ತಂತಿ ಮುಟ್ಟಿದರೆ ಪ್ರಾಣ ಹಾನಿ ಇರುವುದಿಲ್ಲ ಆದರೆ ವಿದ್ಯುತ್ ತಂತಿ ಸೋಲಾರ ತಂತಿಯ ಮೇಲೆ ಇತ್ತು ಎನ್ನುತ್ತಾರೆ. ಸೋಲಾರ ತಂತಿಗೆ ಅದರದೇಯಾದ ಬ್ಯಾಟರಿ ಮತ್ತು ಚಾರ್ಜರ್ ಇರುತ್ತದೆ ಎಂದರೆ ಸರಿ. ದೂರುದಾರರು ಮೊದಲು ಕೆ ಇ ಬಿ ಅಧಿಕಾರಿಗಳು ಮತ್ತು ಲೈನ್‌ಮೆನ್ ಮೇಲೆ ದೂರು ಕೊಟ್ಟಿದ್ದಾರೆ ಎಂದರೆ ಸರಿ. ಕೆ ಇ ಬಿ ಯವರು ದೂರುದಾರರಿಗೆ ಪರಿಹಾರ ಧನ ಕೊಟ್ಟಿದ್ದಾರೆ ಎಂದರೆ ಸರಿ. ಈ ರೀತಿ ಪರಿಹಾರಧನ ಕೊಟ್ಟಿದ್ದರಿಂದ ದೂರುದಾರರು ಕೆ ಇ ಬಿ ಯವರ ಹೆಸರು ಬಿಟ್ಟಿದ್ದಾರೆಂದರೆ ಸರಿ. ಕೆ ಇ ಬಿ ಅಧಿಕಾರಿಗಳ ಅಲಕ್ಷ್ಯತನದಿಂದ ಘಟನೆಯಾದರೂ ಕೇಸ್ ನಿಂದ ಕೈ ಬಿಟ್ಟಿದ್ದಾರೆಂದರೆ ಸರಿ. ಆರೋಪಿತರು ಹಣವನ್ನು ಕೊಡದೇ ಇರುವ ಕಾರಣ ಅವರ ಮೇಲೆ ಫಿರ್ಯಾದಿ ಕೊಟ್ಟಿದ್ದಾರೆ ಎಂದರೆ ಹೌದು ಅವರು 2 ಲಕ್ಷ ಹಣವನ್ನು ಕೊಡುತ್ತೇನೆಂದು ಹೇಳಿ ಕೊಟ್ಟಿರುವುದಿಲ್ಲ ಎನ್ನುತ್ತಾರೆ. ಆರೋಪಿತರಿಂದ ಯಾವುದೇ ಅಲಕ್ಷ್ಯತನ ಆಗದೇ ಇದ್ದರೂ ಅವರ ಮೇಲೆ ದೂರು ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಅವರ ಹೊಲದಲ್ಲಿ ಹುಡುಗ ಸತ್ತಿದ್ದಾನೆ ಎನ್ನುತ್ತಾರೆ. ಘಟನೆಗೂ ಆರೋಪಿತರು ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಫಿರ್ಯಾದಿದಾರರು ನಿಮ್ಮ ಆಪ್ತರು ಎಂದರೆ ಸರಿಯಲ್ಲ ಅವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಘಟನೆಯನ್ನು ನೋಡಿಲ್ಲ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

**ಓ.ಹೇ.ಕೇ.ಸರಿ ಇದೆ.**
ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ

# Government of Karnataka
## Deposition Sheet (R.P.N.57) Form 4 Criminal

### ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 203/2017 |

ದಿನಾಂಕ 24-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 7 ಪ್ರಾಸಾಃ 7

| | |
|---|---|
| ಹೆಸರು | ಚನ್ನಪ್ಪ |
| ತಂದೆಯ ಹೆಸರು | ವೀರಣ್ಣ ಪಾಟೀಲ್ |
| ವಯಸ್ಸು | 55 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಕೋಣಚಪ್ಪಳಿ ತಾ: ದೇವದುರ್ಗ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ಸಾಕ್ಷಿಯು ಶವ ತನಿಖಾ ವರದಿಗೆ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ನಿ ಪಿ 2 ಎಂದು ಸಾಕ್ಷಿ ಸಹಿಯನ್ನು ನಿ ಪಿ 2(ಎ) ಎಂದು ಗುರುತಿಸಲಾಯಿತು. ಸ್ಥಳ ಪಂಚನಾಮೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ನಿ ಪಿ 3 ಎಂದು ಸಾಕ್ಷಿ ಸಹಿಯನ್ನು ನಿ ಪಿ 3(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸುಮಾರು 10 ವರ್ಷದ ಹಿಂದೆ ಕೊಣಚಪ್ಪಳಿ ಗ್ರಾಮದ ಹನುಮನದೇವರ ದೇವಸ್ಥಾನಲ್ಲಿ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಅಮರೇಶಗೌಡನ ಹೊಲದಲ್ಲಿ ಸೋಲಾರ ತಂತಿಯನ್ನು ಹಾಕಿದ್ದು ವಿದ್ಯುತ್ ಕಂಬ ಬಿದ್ದು ವಿದ್ಯುತ್ ತಂತಿ ಸೋಲಾರ ತಂತಿಯ ಮೇಲೆ ಬಿದ್ದು ವಿದ್ಯುತ್ ಹರಿದಿತ್ತು. 3 ಜನ ಹುಡುಗುರು ಮೇವು ತರಲು ಹೋಗಿದ್ದರು ಇಬ್ಬರು ಹುಡುಗರು

ತಂತಿಯನ್ನು ದಾಟಿ ಹೋಗಿದ್ದರು. ಒಬ್ಬ ಹುಡುಗು ಶರಣಬಸವ ತಂತಿ ತಗಲು ವಿದ್ಯುತ್ ಹರಿದು ಸ್ಥಳದಲ್ಲೆ ಮರಣ ಹೊಂದಿರುತ್ತಾನೆ. ಪೋಲಿಸರು ಬಂದು ನನ್ನ ಸಹಿಯನ್ನು ಮಾಡಿಸಿಕೊಂಡಿರುತ್ತಾರೆ. ಈ ಬಗ್ಗೆ ಪೋಲಿಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ.

**ಪಾಟೀಸವಾಲು : ಆರೋಪಿತರ ಶ್ರೀ ವಿ ಎಮ್ ಎಮ್ ವಕೀಲರಿಂದ**

1. ಹನುಮನದೇವರ ಗುಡಿಯಲ್ಲಿ ಚಾಸಾ-3, 5 ಮತ್ತು 8 ಇವರ ಸಹಿ ಪಡೆದಿರುತ್ತಾರೆ. ಪಂಚನಾಮೆಗೆ ಒಬ್ಬೊಬ್ಬರು 2 ಸಹಿಗಳನ್ನು ಮಾಡಿರುತ್ತೇವೆ. ಸಹಿ ಮಾಡಿದಾಗ ಸಮಯ ಮಧ್ಯಾಹ್ನ 12-30 ಗಂಟೆಯಾಗಿತ್ತು. ನಾನು ಸಹಿ ಮಾಡಿದ ಜಾಗಕ್ಕೂ ಘಟನಾ ಸ್ಥಳಕ್ಕೂ ಅಂದಾಜು 4 ಹೊಲ ಅರ್ಧ ಕಿ ಮಿ ದೂರ ಇತ್ತು. ಪಂಚನಾಮೆಯಲ್ಲಿ ಏನೂ ಬರೆದಿದ್ದಾರೆ ನಿಮಗೆ ಗೊತ್ತಿದೆಯಾ ಗೊತ್ತಿಲ್ಲ ಎನ್ನುತ್ತಾರೆ. ಪಂಚನಾಮೆಯಲ್ಲಿ ಘಟನೆಯ ಸ್ಥಳದ ಚಕ್‌ಬಂದಿ ಬರೆದಿದ್ದಾರೆಯೇ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿ ಪಿ 3 ಸ್ಥಳ ಮಹಜರನಲ್ಲಿ ಅಮರೇಶನಗೌಡನ ಹೊಲದ ಎಂದು ಬರೆದಿಲ್ಲ ಎಂದರೆ ಸರಿಯಲ್ಲ. ಮಹಜರನಲ್ಲಿ ಯಾವ ಸರ್ವೆ ನಂಬರ್ ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಮಹಜರನಲ್ಲಿ ಅಮರೇಶಗೌಡನ ಹೊಲದ ಬರೆದಿದ್ದಾರೆಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಪೋಲಿಸರು ಮಹಜರನ್ನು ಮಧ್ಯಾಹ್ನ 2-30 ರಿಂದ 4-00 ಗಂಟೆಯವರೆಗೆ ಎಂದು ನಮೂದು ಮಾಡಿದ್ದಾರೆ ಎಂದರೆ ಸಾಕ್ಷಿಯು ಅವರು ಮೊದಲೆ ಸಹಿ ಮಾಡಿಸಿಕೊಂಡಿದ್ದರು ಎನ್ನುತ್ತಾರೆ. ನೀವು ಸಹಿ ಮಾಡುವಾಗ ಮಹಜರನಲ್ಲಿ ಏನೂ ಬರೆದಿರಲಿಲ್ಲ ಎಂದರೆ ಸಾಕ್ಷಿಯು ಎಲ್ಲಾ ಮೊದಲೇ ಬರೆದಿದ್ದರು ಎನ್ನುತ್ತಾರೆ. ಸಾಕ್ಷಿಯು ಮುಂದುವರಿದು ಹನುಮನದೇವರ ಗುಡಿಯಲ್ಲಿ ಮಹಜರ ಬರೆದಿದ್ದರು ಎನ್ನುತ್ತಾರೆ. ಮಹಜರಿಗೆ ಚಾಸಾ-8 ರವರು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಮ್ಮ ಸಮಕ್ಷಮ ಮಹಜರನ್ನು ಬರೆದಿದ್ದರು ನೀವು ಅದಕ್ಕೆ ಸಹಿ ಮಾಡಿದ್ದೇವೆಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ದೂರುದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ

## Government of Karnataka
## Deposition Sheet (R.P.N.57) Form 4 Criminal

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 203/2017 |

ದಿನಾಂಕ 24-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 8 ಪ್ರಾಸಾಃ 8

| | |
|---|---|
| ಹೆಸರು | ಹನುಮಂತ |
| ತಂದೆಯ ಹೆಸರು | ಭಾಗಪ್ಪ ಸಂಗನ |
| ವಯಸ್ಸು | 58 ವರ್ಷ |
| ಉದ್ಯೋಗ | ಕೂಲಿ |
| ವಾಸಸ್ಥಳ | ಕೋಣಚಪ್ಪಳಿ ತಾ: ದೇವದುರ್ಗ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ಚಾಸಾ-1 ರಿಂದ 5 ನನಗೆ ಪರಿಚಯ ಇರುತ್ತಾರೆ. ನಾನು ಹೆಬ್ಬೆಟ್ಟಿನ ಸಹಿಯನ್ನು ಮಾಡುತ್ತೇನೆ. ಸಾಕ್ಷಿಗೆ ಶವ ತನಿಖಾ ವರದಿ ಮತ್ತು ಸ್ಥಳ ಪಂಚನಾಮೆಯಲ್ಲಿ ಅವರ ಹೆಸರಿನ ಸಹಿ ಇದ್ದು ಅದನ್ನು ಗುರುತಿಸಲು ತಿಳಿಸಿದ್ದು ನಾನು ಹೆಬ್ಬೆಟ್ಟಿನ ಸಹಿಯನ್ನು ಮಾಡುತ್ತೇನೆ ಎನ್ನುತ್ತಾರೆ. ಸುಮಾರು 10 ವರ್ಷದ ಹಿಂದೆ ಅಮರಪ್ಪನಗೌಡನ ಹೊಲದಲ್ಲಿ ಸೋಲಾರ ತಂತಿ ಹಾಕಿದ್ದರು. ವಿದ್ಯುತ್ ಕಂಬ ಬಿದ್ದು ವಿದ್ಯುತ್ ತಂತಿ ಸೋಲಾರ ತಂತಿಯ ಮೇಲೆ ಬಿದ್ದು ವಿದ್ಯುತ್ ಹರಿದಿತ್ತು. 3 ಜನ ಹುಡುಗುರು ಮೇವು ತರಲು ಹೋಗಿದ್ದರು ಇಬ್ಬರು ಹುಡುಗರು ತಂತಿಯನ್ನು ದಾಟಿ ಹೋಗಿದ್ದರು. ಒಬ್ಬ ಹುಡುಗು ಶರಣಬಸವ ತಂತಿ ತಗಲು ವಿದ್ಯುತ್ ಹರಿದು ಸ್ಥಳದಲ್ಲೆ ಮರಣ ಹೊಂದಿರುತ್ತಾನೆ.

**ಪಾಟೀಸವಾಲು : ಆರೋಪಿತರ ಶ್ರೀ ವಿ ಎಮ್ ಎಮ್ ವಕೀಲರಿಂದ**

1. ನಿ ಪಿ 2 ಮತ್ತು 3 ರ ಪಂಚನಾಮೆಯಲ್ಲಿ ನಿಮ್ಮ ಹೆಬ್ಬಟ್ಟಿನ ಸಹಿ ಇರುವುದಿಲ್ಲ ಎಂದರೆ ಸರಿ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ ನಾನು ಹೆಬ್ಬೆಟ್ಟಿನ ಸಹಿ ಮಾಡುತ್ತೇನೆ. ಪಂಚನಾಮೆಯಲ್ಲಿ ಬರೆದ ವಿಷಯ ಓದಿ ಹೇಳಿದ್ದಾರೆಯೇ ಎಂದರೆ ಓದಿ ಹೇಳಿದ್ದಾರೆ ಎನ್ನುತ್ತಾರೆ. ಪಂಚನಾಮೆಯನ್ನು ಹೊಲದಲ್ಲಿ ಮಾಡಿದರು. ಸ್ಥಳ ಮಹಜರನ್ನು ಮಧ್ಯಾಹ್ನ 2-00 ಗಂಟೆಗೆ ಮಾಡಿದರು ಮಣ್ಣು ಮಾಡುವ ಜಾಗದಲ್ಲಿ ಸಂಜೆ 5-00 ಗಂಟೆಗೆ ಮಹಜರಿಗೆ ಸಹಿ ಮಾಡಿದ್ದೇನೆ. ನಿಮ್ಮ ಸಮಕ್ಷಮ ಮಹಜರ ಮಾಡಿಲ್ಲ ನೀವು ಮಹಜರಿಗೆ ಹೆಬ್ಬೆಟ್ಟು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಹನುಮಂತ ತಂದೆ ಭಾಗಪ್ಪ ಸಂಗನ ಎನ್ನುವ ಹೆಸರಿನವನು ನಾನೊಬ್ಬನೆ ನಮ್ಮೂರಿನಲ್ಲಿರುತ್ತೇನೆ. ಇದೇ ಹೆಸರಿನವರು ನಿಮ್ಮೂರಿನಲ್ಲಿ 20 ಜನರು ಇದ್ದಾರೆ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಸರ್ವೆನಂಬರ್ ಬರೆದುಕೊಂಡಿರುತ್ತಾರೆ. ಆ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಪಂಚನಾಮೆಯಲ್ಲಿ ಸರ್ವೆ ನಂಬರ್ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಶಿವನಗೌಡನ ಹೊಲದ ಸರ್ವೆ ನಂಬರ್ ಬರೆದಿದ್ದಾರೆಯೇ ಎಂದರೆ ನನಗೆ ಗೊತ್ತಿಲ್ಲ. ಪಂಚನಾಮೆಯಲ್ಲಿ ಶಿವನಗೌಡನ ತಂದೆಯ ಹೆಸರು ಬರೆದಿದ್ದಾರೆ. ಪಂಚನಾಮೆ ಮಾಡಿದ ಸ್ಥಳದ ಚಕ್‌ಬಂದಿ ಪೂರ್ವಕ್ಕೆ ಅಮರಪ್ಪಗೌಡನ ಹೊಲ, ಪಶ್ಚಿಮಕ್ಕೆ ಕೃಷ್ಣಾ ನದಿ , ಉತ್ತರಕ್ಕೆ ಶಿವನಗೌಡನ ಹೊಲ, ದಕ್ಷಿಣಕ್ಕೆ ಲಿಂಗಪ್ಪ ನ ಹೊಲ.

2. ವಿದ್ಯುತ್ ಕಂಬ ಅಮರಪ್ಪನಗೌಡನ ಹೊಲದಲ್ಲಿತ್ತು. ಅಮರಪ್ಪನಗೌಡನ ಹೊಲದಲ್ಲಿ ಕಂಬ ಇರಲಿಲ್ಲ ಎಂದರೆ ಸರಿಯಲ್ಲ. ವಿದ್ಯುತ್ ಕಂಬ ಉತ್ತರ ದಿಕ್ಕಿನಲ್ಲಿತ್ತು. ಅಮರಪ್ಪಗೌಡನ ಹೊಲದಲ್ಲಿ ಟಿ ಸಿ ಇರುವಂತಹ ಎರಡು ಕಂಬಗಳು ಇದ್ದವು. ಸೋಲಾರ ತಂತಿ ಹಾಕಿದ ಹೊಲಕ್ಕೆ ದಾರಿ ಇತ್ತು. ಸೋಲಾರ ತಂತಿ ಅಂದಾಜು 3 ಪೂಟು ಇತ್ತು. ಹೊಲದ ಸುತ್ತ ಸೋಲಾರನ 02 ತಂತಿಗಳು ಇದ್ದವು. ಸೋಲಾರ ತಂತಿಯಿದ್ದ ಕಟ್ಟಿಗೆ ಸುಮಾರು 4 ಪೂಟು ಎತ್ತರ ಇತ್ತು. ನಿಮ್ಮ ಸಮಕ್ಷಮ ಯಾವುದೇ

ಮಹಜರ ಮಾಡಿಲ್ಲ ಎಂದರೆ ಸರಿಯಲ್ಲ. ನೀವು ಫಿರ್ಯಾದಿದಾರರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ